ಗೈರ್ ವಿ ಲಾ

ಆದ ಕರ್ಣಿಸಿ ನೋಟಿನ

ನಂ.	ಸರ್ಕಲ್	ಕ್ರಯ	ಸ್ವಂತಗಾರ
I 20—47384	ಮದರಾಸ್ ಮರುಕಂ 8—9—88	ರೂ. 100	ಮೈಸೂರು ಸ್ಪೇಷ್ ವಾಚ್ಸ್ ಮೆಸ್ಸರ್ ಜಿ. ಮೆಯಿಲ್.

ಕೊಡಗು ಫಾರೆಸ್ಟ್ಸ್ ಇಲಾಖಾ.

ನೋ ೬ಟಿ ಸ್.

ಸ್ ೧೮೯೦ನೇ ಇಸವಿ ಜುಲೈ ತಾರೀಖು 10ರಲ್ಲು ಇದರಿಂದ ನಮೂದಿಸಿದ ತೊಲೆ ವಗೈರೆ ಸಾಮಾನುಗಳು ಹುಣಸೂರು ಡಿಪೋದಲ್ಲಿ ಸ್ ೧೮೯೦ನೇ ಇಸವಿ ಆಗಸ್ಟ್ ತಾರೀಖು 21ರಲ್ಲಿ ಹರಾಜ್ ಹಾಕಲ್ಪಡುತ್ತೆ —

ತ್ಯಾಗದ ತೊಲೆಗಳು	450	..	13800 ಅಡಿ
ಹೊನ್ನೆ ವಗೈರೆ	580	..	15300 ,,
ಸ್ಲೀಪರ್	6750	..	8550 ,,
ತ್ಯಾಗದ ಮರದ ಕುಯಿದ ಸಾಮಾನು	770	..	1160 ,,
ಆರೆಕಾಲು ವಟ್ಟಮರ	28900	..	,,

ಷರತ್:—ಸ್ ೧೮೮೯ನೇ ಇಸವಿ ಡಿಶಂಬರ್ ತಾರೀಖು 19 ನಂಬರ್ 53ರರ ಚೀಫ್ ಕಮ್ಮಿಷನರ್ ಸಾಹೆಬರವರ ನೋಟಿಫಿಕೇಷ್ ಮೇ ಮರದ ಕ್ರಯದ ಪೈಕಿ ಶೇಕಡ ಹತ್ತರಷ್ಟು ಮೊಬಲಗನ್ನ ಹರಾಜ್ ಕಾಲದಲ್ಲಿ ಪಾವತಿ ಮಾಡಿ ಬುಕಿ ಮೊಬಲಗನ್ನ ಹರಾಜು ತಾರಿಖು ಆಗಾಯತು 30 ದಿನಗಳೊಳಗೆ ಪಾವತಿ ಮಾಡತಕ್ಕದ್ದು.

ಜೆ. ಮೆಕ್ಕೆ,
ಡೆಪ್ಯುಟಿ ಕ್ಷ ಸರ್ವೇಟರ್.

ಸ್ವಂತ ಪ್ರಕಟನೆ.

ಮೈಸೂರು ಮಂಡಿಮಹಲ್ಲೇಲಿ ಇರುವ ಬೇಲೂರಯ್ಯನವರ ಮಗ ಕೇಶವಯ್ಯನವರು, ಸ್ ಮಜಕೂರ್ ಮೇ ತಾರೀಖು 17ನೇ ಮೈಸೂರು ಗೆಜೆಟ್ 2ನೇ ಭಾಗದ 167ನೇ ಪುಟದಲ್ಲಿ ಪ್ರಕಟಿಸಿ ಯಿರುವ ನೊಟೀಸನ್ನ ನಾನು ಈಗತಾನೆ ನೋಡಿದೆ.

ಅದರಲ್ಲಿ ಕಂಡಂತೆ ಈ ಕೇಶವಯ್ಯನವರು ನಡಸುತ್ತಾ ಯಿದ್ದ ಬೆಂಗಳೂರು ತರಗಿನ ಪೇಟೆ ಜಿನಸಿಮಂಡಿಯ ವ್ಯಾಪಾರದ ಲೆಣಾ ದೇಣೆಯನ್ನ ನನಿಗೆ ವಹಿಸಿದ್ದಾಗಿ ಹೇಳುವ ಮಾತು ಈ ಕೆಳಗೆ ವಿವರಿಸಿ ಯಿರುವ ಪ್ರಕಾರ ತಪ್ಪಾಗಿ ಯಿದೆ, ಅಂಥಾ ಜವಾಬ್ದಾರಿಯನ್ನ ನಾನು ಹೊಂದಿರುನದಿಲ್ಲ ಹ್ಯಾಗಂದರೆ.

ಡಿಟೋ ಕೇಶವಯ್ಯನವರ ಅಣ್ಣಂದರಾದ ವೆಂಕಟರಮಣಪ್ಪನವರನ್ನ ನಮ್ಮ ಹಿರಿಯರ ದಿವಸದ ಲಾಗಾಯತು ಪಾಲದಾರನ್ನ ಮಾಡಿ ಇವರ ಜವಾಬ್ದಾರಿ ಮೇಲೆ ಮೈಸೂರು ಕಲ್ಯಾಣಿ ಚೌಕದಲ್ಲಿ ನಮ್ಮ ಚಿಕ್ಕಂಗಡಿಯಲ್ಲಿ ನಡಿಯುವ ದರೋಬಸ್ತು ವ್ಯಾಪಾರಗಳನ್ನು ನಡಿಸುತ್ತಾ ಬಂದಿರುತ್ತೆ. ಯಿಂಥಾ ಲೆಕ್ಕವನ್ನು ಸ್ ಗುದಸ್ತಾ ನವಂಬರ್ ತಾರೀಖು 20ರ ವರಿಗೆ ಲೆಕ್ಕ ಕೈದ್‌ವಾಡಿ ಲೆಣಾ ದೇಣ ವಗೈರೆ ಫೈಸಲ್ ಪಟ್ಟ ಬರಸಿ ತಂದುಕೊಟ್ಟು ಯಿರುವದರಲ್ಲಿ ಮೇಲ್ಕಂಡ ಕೇಶವಯ್ಯನವರು ನಡಸುವ ಜಿನಸಿಮಂಡಿಯೆ ಮುಂತಾದ ಯಿನ್ನೂ ಕೆಲವು ಬಾಬುಗಳ ಲೆಕ್ಕಗಳು ಮತ್ತು ನಮ್ಮ ಸ್ವಂತ ಜವಾಖರ್ಚು ಲೆಕ್ಕಗಳು ವಗೈರೆ ಕ್ರಮವಾಗಿ ಆಗಬೇಕಾಗಿ ಯಿರುತ್ತೆ. ಯಿಂಥಾ ಆಗಬೇಕಾಗಿ ಯಿರುವ ಯಲ್ಲಾ ಲೆಕ್ಕಗಳನ್ನು ಸರಿಯಾಗಿ ಮಾಡಿ ಇಸಂವಾರು ಸರಿಯಾಗಿ ಮಕಾಬಿಲೆ ಮಾಡಿ ಕೊಡುತ್ತೇನೆಂತಲು ಅದರಲ್ಲಿ ವ್ಯತ್ಯಸ ಬಂದರೆ ಆ ಬಾಬತು ಮೊಬಲಗನ್ನು ತಮ್ಮ ಕೈಯಿಂದ ಕೊಡುವದಾಗಿ ಡಿಟೋ ವೆಂಕಟರಮಣಪ್ಪನವರು ನನಿಗೆ ವಡಂಬಡಿಕೆ ಮಾಡಿದ್ದರಿಂದ ಯಿವರು ಬಹುದಿವಸದ ಲಾಗಾಯತು ನಮ್ಮಲ್ಲಿ ಪಾಲದಾರರಾಗಿ ಯಿರುವ ಕಾರಣ ಇವರ ವಾಕ ಭರವಸೆ ಮೇಲೆ ಡಿಟೋ ಕೇಶವಯ್ಯನವರ ಮಂಡಿ ಲೆಕ್ಕವನ್ನ ವಹಿಸಿಕೊಂಡದ್ದಾಗಿ ಯಿರುತ್ತೆ ಹೊರ್ತು ಮತ್ತೆ ಹ್ಯಾಗು ಅಲ್ಲಾ, ಮತ್ತು ಕೇಶವಯ್ಯನವರು ನನಿಗೆ ವಹಿಸಿಯು ಯಿಲ್ಲ ಡಿಟೋ ಲೆಕ್ಕವಾದ ನವಂಬರ್ 20ರ ಲಾಗಾಯತು ತಹಲೆ ವರಿವಿಗು ಈ ಕೇಶವಯ್ಯನವರೇ ಆಗಲಿ ವೆಂಕಟರಮಣಪ್ಪನವರೇ ಆಗಲಿ ಡಿಟೋ ಮಂಡಿ ಲೆಕ್ಕದ ಲೆಣಾದೇಣ ವಗೈರೆ ನನಿಗೆ ಸಮಜಾಯಿಷಿ ಯಿಂದ್ಲ ಕ್ರಮವಾಗಿ ಕುಳ ಮಕಾಬಿಲೆ ಕೊಟ್ಟಿಲ್ಲ, ಕೇಳಿದಾಗೆಲ್ಲ ಕಾಲಹರಣ ಜವಾಬ್ ಹೇಳುತ್ತಾ ಬರುವದ್ದರಿಂದ ಯಿಂಥಾ ಆಗದೆ ಯಿರುವ ಲೆಕ್ಕದ ಭಾಗದಲ್ಲಿ ವಹಿಸಿದೆ ಯಂಬ ಮಾತ್ರವೆ ಯಿವರ ಜವಾಬ್ದಾರಿ ಹೋಗಲಾಡಿಸಿ ಕೊಂಡಹಾಗೆ ಆಧೀತೆ ಹಾಗೆ ಹೋಗಲಾಡಿಸಿ ಕೊಂಡಿರುವದಿಲ್ಲ, ಈ ಕೇಶವಯ್ಯನವರು ಮಂಡಿ ಲೆಕ್ಕ ಮಾಡಿ ಕೊಡಬೇಕಾಗಿರುವದು ಹೊರ್ತು ಯಿದರಂತೆ ಯಿನ್ನೂ ಬಾಬುಗಳ ಲೆಕ್ಕಗಳು ನಮ್ಮ ಸ್ವಂತ ಜವಾಖರ್ಚು ಲೆಕ್ಕಗಳು ವಗೈರೆ ಆಗಬೇಕಾಗಿ ಯಿರುವದು ಯಾವತ್ತು ಲೇಣಾ ದೇಣಾದಾರ ಸಮಜಾಯಿಷಿ ಯಿಂದ್ಲ ಮಕಾಬಿಲೆ ಮಾಡಿ ಕೊಡಬೇಕು, ಮೊಬಲಗು ಕಂಮೇಷಾದರೆ ಆ ಬಾಬತು ಮೊಬಲಗು ಈ ವೆಂಕಟರಮಣಪ್ಪನವರು ಕೊಡಬೇಕು ಯಂದು ಯಿವರ ಜವಾಬ್ದಾರಿ ಮೇಲೆ ಯಿರುತ್ತೇಯಾಗಿ ಇದರಿಂದ ಪ್ರಸಿದ್ಧಪಡಿಸಿರುತ್ತೇನೆ.

23—7—90 ಮೈಸೂರು.

ಚಿಕ್ಕ ಮಲ್ಲಯ್ಯ.

Mysore Govt. Central Press, Bangalore.—1890.